ಒ.ಎಸ್.- 34/2020
ಡಿ.ಡಬ್ಲ್ಯು- 01

**ದಿನಾಂಕ 17-08-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು - ವಾದಿ ಪರ ಡಿಬಿಎಸ್ ವಕೀಲರಿಂದಃ**

ನಾನು ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ನಾನು ಐಟಂ ನಂ.6 ರ ಸ್ವತ್ತನ್ನು ಖರಿದಿಸಲು ಕೊಟ್ಟ ಹಣದ ಮೂಲದ ಬಗ್ಗೆ ಮತ್ತು ಹಣದ ಪಾವತಿ ಮಾಡಿದ ವಿವರದ ಬಗ್ಗೆ ನನ್ನ ಐಟಿ ರಿಟನ್ಸ್ ನಲ್ಲಿ ಕಾಣಿಸಿದ್ದೇನೆ ಎಂದು ಹೇಳಿದ್ದು ಆ ರೀತಿ 2007-08 ರ ರಿಟನ್ಸ್ ನಲ್ಲಿ ಕಾಣಿಸಿರುತ್ತೇನೆ, ಕಾರಣ 2007 ರಲ್ಲಿ ನಾನು ಅದನ್ನು ಖರಿದಿಸಿರುತ್ತೇನೆ. ಸಾಕ್ಷಿ ಮುಂದುವರಿದು ಒಮ್ಮೊಮ್ಮೆ ಆ ವರ್ಷದಲ್ಲಿ ಬಿಟ್ಟು ಹೋಗಿದ್ದರೇ ಮುಂದಿನ ವರ್ಷದಲ್ಲಿ ಕಾಣಿಸಿದ್ದೇನೆ ಎಂದು ತಿಳಿಸಿರುತ್ತಾರೆ . ಐಟಂ ನಂ. 6 ರ ಸ್ವತ್ತನ್ನು ನಾನು 56 ಲಕ್ಷಕ್ಕೆ ಖರಿದಿಸಿರುತ್ತೇನೆ. 2007-08 ರ ನನ್ನ ಐಟಿ ರಿಟನ್ಸ್ ನಲ್ಲಿ ಐಟಂ ನಂ. 6 ರ ಸ್ವತ್ತನ್ನು ಖರಿದಿಸಲು ಕೊಟ್ಟ ಹಣದ Source of Income ಬಗ್ಗೆ ನಮೂದು ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಐಟಿ ರಿಟನ್ಸ್ ನಲ್ಲಿ ಕಂಡುಬರುತ್ತಿಲ್ಲ ಆದರೇ ಅದರ ಜೊತೆ ಲಗತ್ತಿಸಿರುವ Annexure ನಲ್ಲಿ ಇರಬಹುದು ಎಂದು ತಿಳಿಸಿರುತ್ತಾರೆ . ಐಟಂ ನಂ. 6 ರ ಸ್ವತ್ತನ್ನು ಖರಿದಿಸುವ ಸಮಯದಲ್ಲಿ ಅಂದರೆ 2007-08 ರಲ್ಲಿ ನನ್ನ Gross Income ರೂ. 1,99,489/- ಆಗಿರುತ್ತದೆ . ಅದರ ಹಿಂದಿನ ವರ್ಷ ಅಂದರೆ 2006-07 ರಲ್ಲಿ ನನ್ನ Gross Income ರೂ 1,72,367/- ಆಗಿರುತ್ತದೆ . ಸಾಕ್ಷಿ ಮುಂದುವರಿದು ನಾನು ಈಗ ಹೇಳಿದ್ದು ನನ್ನ ಆ ವರ್ಷದ ನನ್ನ ಆದಾಯ ಆದರೇ ಆಸ್ತಿ ಖರಿದಿಸಲು **source of funds** ಬೇರೆ ಆಗಿರುತ್ತದೆ **.** Source of Funds ಮತ್ತು Gross Income ಬೇರೆ ಬೇರೆ ಆಗಿರುತ್ತದೆ . ನಾನು ಪ್ರತಿ ವರ್ಷ Taxable Income ನ್ನು Declare ಮಾಡುತಿದ್ದೇನೆ . Non Taxable Income ನ್ನು ಕಾಣಿಸಿಲ್ಲ. Non Taxable Income ನ್ನು ಅಂದರೆ exempted Income ನ್ನು ನಮ್ಮ CA ಹೇಳಿದ ಮೇರೆಗೆ ನಾನು ಐಟಿ ರಿಟನ್ಸ್ ನಲ್ಲಿ ಕಾಣಿಸಿಲ್ಲ . Exempted Income ಗೆ Tax ಕಟ್ಟದೇ ಇದ್ದರೂ ಕೂಡ ಅದನ್ನು ರಿಟನ್ ನಲ್ಲಿ Declare ಮಾಡಬೇಕಾಗುತ್ತದೆ ಎಂದರೆ ಸರಿಯಲ್ಲ. ಐಟಂ ನಂ.6 ರ ಸ್ವತ್ತನ್ನು ಖರಿದಿಸಲು ಯಾವ Exempted Income ಹಣವನ್ನು ವಿನಿಯೋಗಿಸಿದ್ದೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನೋಡಿ ಹೇಳಬೇಕು ಎಂದು ತಿಳಿಸಿರುತ್ತಾರೆ. Exempted Income ಬಗ್ಗೆ ನಾನು

ರಿಟನ್ಸ್ ನಲ್ಲಿ ಕಾಣಿಸಿಲ್ಲ, ಆದರೇ Source of Funds ಬಗ್ಗೆ ರಿಟನ್ಸ್ ನಲ್ಲಿ ಕಾಣಿಸಿದ್ದೇನೆ ಆದರೇ ದಾಖಲೆಯನ್ನು ಇನ್ನೂ ನ್ಯಾಯಲಯಕ್ಕೆ ಹಾಜರುಪಡಿಸಿದ್ದೇನೆ .

ನನ್ನ ಎಸ್ ಬಿ ಅಕೌಂಟ್ ನಲ್ಲಿ ಇದ್ದ ಹಣ ಮತ್ತು ಠೇವಣಿ ಖಾತೆಯಲ್ಲಿ ಇದ್ದ ಹಣವನ್ನು ರಿಟನ್ಸ್ ನಲ್ಲಿ ಕಾಣಿಸಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ರಿಟನ್ಸ್ ನಲ್ಲಿ ನಲ್ಲಿ ಕಾಣಿಸುವ ಅವಶ್ಯಕತೆ ಇಲ್ಲ ಎಂದು ತಿಳಿಸಿರುತ್ತಾರೆ . 2002 ರಿಂದ 2010 ರ ತನಕ ನನ್ನ ಎಸ್ ಬಿ ಅಕೌಂಟ್ ನಲ್ಲಿ ಇದ್ದ ಹಣ ಮತ್ತು ನಿಶ್ಚಿತ ಠೇವಣಿಯಲ್ಲಿ ಇದ್ದ ಹಣ ಕುಟುಂಬದ ಹಣವಾಗಿದ್ದರಿಂದ ನಾನು ಐಟಿ ರಿಟನ್ಸ್ ನಲ್ಲಿ ಕಾಣಿಸಿಲ್ಲ ಎಂದರೆ ಸರಿಯಲ್ಲ. ನನ್ನ ಎಸ್ ಬಿ ಅಕೌಂಟ್ ನಲ್ಲಿ ಇದ್ದ ಹಣ ಮತ್ತು ನಿಶ್ಚಿತ ಠೇವಣಿಯಲ್ಲಿ ಇದ್ದ ಹಣ ನನ್ನ ಕುಟುಂಬದ ತಮ್ಮಂದಿರು ಮತ್ತು ಅಕ್ಕ ತಂಗಿಯರಿಗೆ ಸೇರಬೇಕಾದ ಹಣ ಎಂದರೆ ಸರಿಯಲ್ಲ . ಆ ಕಾರಣದಿಂದ ನಾನು ನನ್ನ ಐಟಿ ರಿಟನ್ಸ್ ಈ ಹಣವನ್ನು ಕಾಣಿಸಿಲ್ಲ ಎಂದರೆ ಸರಿಯಲ್ಲ.

ಐಟಂ ನಂ. 6 ರ ಸ್ವತ್ತಿನಲ್ಲಿ ಅಪಾರ್ಟ್ ಮೆಂಟ್ ಕಟ್ಟಿರುತ್ತೇವೆ . ಸದರಿ ಅಪಾರ್ಟ್ ಮೆಂಟ್ ಕಟ್ಟುವ ಸಮಯದಲ್ಲಿ ನಾವು ಡಾ. ಮಹಮ್ಮದ್ ಫಯಾಜ್ ಮತ್ತು ಶ್ರೀಮತಿ ರೇಶ್ಮ ಫಯಾಜ್ ಒಂದು ಕಡೆ ಮತ್ತು ಕೆ ರಾಜೇಂದ್ರ ಕೊಡ್ಗಿ , ವಾದಿ ಮತ್ತು 2 ನೇ ಪ್ರತಿವಾದಿ ಮತ್ತೊಂದು ಕಡೆ ಎರಡನೇ ಪಕ್ಷಗಾರರಾಗಿ Partnership Deed ಮಾಡಿಕೊಂಡಿರುತ್ತೇವೆ . ಐಟಂ ನಂ. 6 ರ ಸ್ವತ್ತಿನಲ್ಲಿ ಅಪಾರ್ಟ್ ಮೆಂಟ್ ಕಟ್ಟಲು ಎಷ್ಟು ಖರ್ಚಾಗಿದೆ ಎಂದು ಅದರ ದಾಖಲೆಗಳು ವಾದಿ ಮನೆಯಲ್ಲಿ ಇರುತ್ತದೆ . ಆದರೇ ನಾನು ಅಂದಾಜಿನ ಮೇಲೆ 1.75 ಕೋಟಿ ಯಿಂದ 2.00 ಕೋಟಿ ಆಗಿರಬಹುದು ಹೇಳುತಿದ್ದೇನೆ . ಅಪಾರ್ಟ್ ಮೆಂಟ್ ಕಟ್ಟಲು ಸಂಪೂರ್ಣ ಮೇಲ್ವಿಚಾರಣೆ ಯನ್ನು ನನ್ನ ತಮ್ಮ ವಾದಿ ನೋಡಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾನೇ ನೋಡಿಕೊಂಡಿರುತ್ತೇನೆ ಎಂದು ತಿಳಿಸಿರುತ್ತಾರೆ. ಅಪಾರ್ಟ್ ಮೆಂಟ್ ಕಟ್ಟಲು ಆದ ಖರ್ಚನ್ನು ಕುಟುಂಬದ ಹಣವನ್ನು ಹಾಕಿ ಕಟ್ಟಿರುತ್ತೇವೆ ಎಂದರೆ ಸರಿಯಲ್ಲ. ಐಟಂ ನಂ. 6 ರ ಸ್ವತ್ತಿನಲ್ಲಿ ಅಪಾರ್ಟ್ ಮೆಂಟ್ ಕಟ್ಟಲು ನಾನು ನನ್ನ ಸ್ವಂತ ಹಣ , ಬೇರೆಯವರಿಂದ ನಾನು ಪಡೆದ ಸಾಲ , ವಾದಿ ಮತ್ತು ಎರಡನೇ ಪ್ರತಿವಾದಿ ಕೂಡ ಸ್ವಲ್ಪ ಸ್ವಲ್ಪ ಹಣವನ್ನು ಹಾಕಿ ಕಟ್ಟಿರುತ್ತೇವೆ . ವಾದಿ ಮತ್ತು

ಎರಡನೇ ಪ್ರತಿವಾದಿ ಹಾಕಿದ ಹಣ ನನ್ನ ಪ್ರಕಾರ ನನ್ನ ಅವರ ಐಟಿ ರಿಟನ್ಸ್ ನಲ್ಲಿ ಕಂಡುಬಂದಿರಬಹುದು . ಅವರುಗಳು ಎಷ್ಟು ಹಣ ಹಾಕಿದ್ದಾರೆ ಎಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ , ಆದರೇ ಅವರು ತುಂಬಾ ಕಡಿಮೆ ಹಣ ಹಾಕಿದ್ದಾರೆ ಎಂದು ತಿಳಿಸಿರುತ್ತಾರೆ . ನಾನು ಐಟಂ ನಂ. 6 ರ ಸ್ವತ್ತಿನಲ್ಲಿ ಕಟ್ಟಡ ಕಟ್ಟಲು ಹಾಕಿದ ಹಣದ ಬಗ್ಗೆ ನನ್ನ ಐಟಿ ರಿಟನ್ಸ್ ನಲ್ಲಿ ಕಾಣಿಸಿರಬಹುದು. ಈ ಬಗ್ಗೆ ಸಾಕ್ಷಿಗೆ ಐಟಿ ರಿಟನ್ಸ್ ಗಳ ದಾಖಲಾತಿಗಳನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಅದರಲ್ಲಿ ನನಗೆ ಹುಡುಕಿ ಯಾವ ದಾಖಲೆ ಎಂದು ತೋರಿಸಲು ಆಗುವುದಿಲ್ಲ ಮತ್ತು ಗೊತ್ತಾಗುವುದಿಲ್ಲ ಎಂದು ತಿಳಿಸಿರುತ್ತಾರೆ . ವಾದಿ ಸಲ್ಲಿಸಿರುವ ಐಟಿ ರಿಟನ್ಸ್ ನಲ್ಲಿ ಅವರು ಎಷ್ಟು ಹಣ ಹಾಕಿದ್ದಾರೆ ಎಂದು ಕಂಡುಬರುತಿದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಾನು ನೋಡಿಲ್ಲ ಎಂದು ತಿಳಿಸಿರುತ್ತಾರೆ .

ಐಟಂ ನಂ. 6 ರ ಸ್ವತ್ತಿನಲ್ಲಿ ಅಪಾರ್ಟ್ ಮೆಂಟ್ ಕಟ್ಟಲು ನಾನು ಪಡೆದ ಸಾಲದ ಬಗ್ಗೆ ನಾನು ನ್ಯಾಯಲಯಕ್ಕೆ ಈಗಾಗಲೇ ಹಾಜರುಪಡಿಸಿರುವ ದಾಖಲೆಯಲ್ಲಿ ಕಂಡುಬರುತ್ತಿಲ್ಲ. ಸಾಕ್ಷಿ ಮುಂದುವರಿದು ದಾಖಲೆ ಇದೆ ಎಂದು ತಿಳಿಸಿರುತ್ತಾರೆ . ಐಟಂ ನಂ. 6 ರ ಸ್ವತಿನಲ್ಲಿ ಅಪಾರ್ಟ್ ಮೆಂಟ್ ಕಟ್ಟಲು ಸಾಲ ಕೊಟ್ಟವರ ಹೆಸರು ನೆನಪಿಲ್ಲ . ಆದರೇ ನಾನು ಮಾರ್ವಾಡಿಗಳಿಂದ ಸಾಲ ಪಡೆದಿದ್ದೇನೆ ದಾಖಲೆ ನೋಡಿ ಹೇಳಬೇಕಾಗುತ್ತದೆ . ನನಗೆ ಸಾಲ ಕೊಟ್ಟವರಿಗೆ ನಾನು ಹಣವನ್ನು ವಾಪಸ್ಸು ಕೊಟ್ಟಿರುತ್ತೇನೆ . ನಾನು ಸಾಲವನ್ನು ವಾಪಸ್ಸು ಕೊಟ್ಟ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ , ಅದು ಕೈ ಸಾಲವಾಗಿತ್ತು . ನಾನು ಸಾಲವಾಗಿ ಪಡೆದುಕೊಂಡಿದ್ದ ಹಣವನ್ನು ಯಾವಾಗ ವಾಪಸ್ಸು ಕೊಟ್ಟೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ . ಅಪಾರ್ಟ್ ಮೆಂಟ್ ಕಟ್ಟಲು ಕುಟುಂಬದ ಹಣವನ್ನು ಉಪಯೋಗಿಸಿದ್ದೇನೆ ಎಂದರೆ ಸರಿಯಲ್ಲ. ಕುಟುಂಬದ ಹಣವನ್ನು ಉಪಯೋಗ ಮಾಡಿದ್ದರಿಂದ ನನ್ನ ಐಟಿ ರಿಟನ್ಸ್ ನಲ್ಲಿ ಅದನ್ನು ಕಾಣಿಸಿಲ್ಲ ಎಂದರೆ ಸರಿಯಲ್ಲ. ನಾನು ಕುಟುಂಬದ ಹಣವನ್ನು ಉಪಯೋಗಿಸಿಕೊಂಡಿಲ್ಲ ಎಂದು ತಿಳಿಸಿರುತ್ತಾರೆ . ಐಟಂ ನಂ. 6 ರ ಸ್ವತ್ತನ್ನು ಖರಿದಿ ಮಾಡಲು ಮತ್ತು ಅದರಲ್ಲಿ ಅಪಾರ್ಟ್ ಮೆಂಟ್ ಕಟ್ಟಲು ನನ್ನ ಸ್ವಂತ ಹಣವನ್ನು ಉಪಯೋಗಿಸಿಲ್ಲ ಎಂದರೆ ಸರಿಯಲ್ಲ.

ಆ ಸಮಯದಲ್ಲಿ ಐಟಂ ನಂ. 6 ರ ಸ್ವತ್ತನ್ನು ಖರಿದಿಸಲು ಮತ್ತು ಅಪಾರ್ಟ್ ಮೆಂಟ್ ಕಟ್ಟಲು ನನ್ನ ಬಳಿ ಅಷ್ಟು ಹಣ ಇರಲೇ ಇಲ್ಲ ಎಂದರೆ ಸರಿಯಲ್ಲ.

ಅಪಾರ್ಟ್ ಮೆಂಟ್ ನ ಕಟ್ಟಡ ಪೂರ್ತಿ ಆದ ನಂತರ ನಮ್ಮ partnership deed ನಮ್ಮ ಮತ್ತು ಮಹಮ್ಮದ್ ಫಯಾಜ್ ನಡುವೆ Partition ಆಗಿ ರದ್ದುಗೊಂಡಿರುತ್ತದೆ. ಸದ್ರಿ ವಿಭಾಗಪತ್ರದಲ್ಲಿ ಶೆಡೂಲ್ ಬಿ ನ ಸ್ವತ್ತು ನನಗೆ , ವಾದಿ ಮತ್ತು ಎರಡನೇ ಪ್ರತಿವಾದಿಗೆ ಬಂದಿರುತ್ತದೆ . ನಮಗೆ ಒಟ್ಟು 5 ಅಪಾರ್ಟ್ ಮೆಂಟ್ ಮತ್ತು ಒಂದು ಟೆರೆಸ್ ಬಂದಿರುತ್ತದೆ . ಅದರಲ್ಲಿ 4 ಅಪಾರ್ಟ್ ಮೆಂಟ್ ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಒಂದು ಟೆರೆಸ್ ಪೆಂಟ್ ಹೌಸ್ ನ್ನು ಕೂಡ ಮಾರಾಟ ಮಾಡಿರುತ್ತೇವೆ. ಒಂದು ಒಂದು ಅಪಾರ್ಟ್ ಮೆಂಟ್ ಗಳನ್ನು 2.15 ಕೋಟಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಪ್ರಕಾರ ತಲಾ ರೂ 78,50,000 ಗಳಿಗೆ 2 ಅಪಾರ್ಟ್ ಮೆಂಟ್ ಗಳನ್ನು ಮಾರಾಟ ಮಾಡಿರುತ್ತೇವೆ . ಒಂದು ಅಪಾರ್ಟ್ ಮೆಂಟ್ ನ್ನು ರೂ 79,20,000-ಕ್ಕೆ ಮಾರಾಟ , ಇನ್ನೊಂದು ಅಪಾರ್ಟ್ ಮೆಂಟ್ ನ್ನು ರೂ 91,75,000 ಕ್ಕೆ ಮಾರಾಟ , ಮತ್ತೊಂದು ಕೊನೆಯದನ್ನು ರೂ 60 ಲಕ್ಷಕ್ಕೆ ಮಾರಾಟ ಮಾಡಿರುತ್ತೇವೆ. ಪೆಂಟ್ ಹೌಸ್ ರೂ 1 ಕೋಟಿ 25 ಲಕ್ಷಕ್ಕೆ ಮಾರಾಟ ವಾಗಿದೆ ಎಂದರೆ ಸರಿಯಲ್ಲ. ಪೆಂಟ್ ಹೌಸ್ ನ್ನು ನಾವು ರೂ 60 ಲಕ್ಷಕ್ಕೆ ಮಾರಾಟ ಮಾಡಿರುತ್ತೇವೆ . ನಾವು ಎಷ್ಟು ಮೊತ್ತಕ್ಕೆ ಮಾರಾಟ ಮಾಡಿರುತ್ತೇವೆ ಅಷ್ಟೆ ಹಣಕ್ಕೆ ನೊಂದಾವಣೆ ಆಗಿರುತ್ತದೆ. Stamp Duty ಉಳಿಸಲು ನಾವು ಜಾಸ್ತಿ ಹಣಕ್ಕೆ ಮಾರಾಟ ಮಾಡಿದ್ದರೂ ಕೂಡ ಕಡಿಮೆ ಹಣ ಕಾಣಿಸಿದ್ದೇವೆ ಎಂದರೆ ಸರಿಯಲ್ಲ. ಅಪಾರ್ಟ್ ಮೆಂಟ್ ಮಾರಾಟ ಮಾಡಿ ಬಂದ ಪ್ರತಿಫಲ ಹಣವನ್ನು ನಿಡಿ 24, ನಿಡಿ 154, ನಿಡಿ 155 ರ ಪ್ರಕಾರ ನಮೆಗೆಲ್ಲರಿಗೂ ಹಂಚಿಕೆ ಆಗಿದೆ . ಅಪಾರ್ಟ್ ಮೆಂಟ್ ಮಾರಾಟ ಮಾಡಿ ಬಂದ ಪ್ರತಿಫಲ ಹಣವನ್ನು ನಾವುಗಳು ಹಾಕಿದ್ದ ಹಣಕ್ಕೆ ಪೂರಕವಾಗಿ ( proportionately) ಹಂಚಿಕೊಂಡಿದ್ದೇವೆ. ಆ ರೀತಿ proportionate ಆಗಿ ಹಂಚಿಕೊಂಡ ಬಗ್ಗೆ ದಾಖಲೆ ಇದೆಯಾ ಇಲ್ಲವಾ ಎಂದು ನೋಡಬೇಕು. ವಾದಿ ಮತ್ತು ಎರಡನೇ ಪ್ರತಿವಾದಿ, ಒಂದು ಅಥವಾ ಎರಡು ಕ್ರಯಪತ್ರ ಆಗುವಾಗ ಬಂದಿರಬಹುದು ನೆನಪಿಲ್ಲ . ಉಳಿದ ಅಪಾರ್ಟ್ ಮೆಂಟ್

ಮಾರಾಟ ಮಾಡಲು ನಾನೇ ಜಿಪಿಎ ಹೋಲ್ಡರ್ ಆಗಿ ಮಾರಾಟ ಮಾಡಿರುತ್ತೇನೆ. ಖರಿದಿ ಮೊತ್ತದಲ್ಲಿ ಹಣದಲ್ಲಿ ಅವರವರಿಗೆ ಬಂದ ಚೆಕ್ ಗಳನ್ನು ಅವರವರಿಗೆ ಕೊಟ್ಟಿರುತ್ತೇನೆ . ವಾದಿ ಮತ್ತು ಎರಡನೇ ಪ್ರತಿವಾದಿ ಹೆಸರಿನಲ್ಲಿ ಇದ್ದ ನಿಡಿ-24, ನಿಡಿ 154 ಮತ್ತು ನಿಡಿ 155 ದಾಖಲೆಗಳು ನಿಮ್ಮ ಕೈಗೆ ಹೇಗೆ ಬಂದಿತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅದು ಒಟ್ಟಿಗೆ Joint ಆಗಿ ಇದ್ದುದರಿಂದ ನಮ್ಮ CA ಬಳಿ ಇತ್ತು ಅದನ್ನು ನಾನು ಕೇಳಿ ಪಡೆದು ತಂದು ಹಾಜರುಪಡಿಸಿರುತ್ತೇನೆ. ನಿಡಿ 155 ದಾಖಲೆಯನ್ನು ನಂದಾಗೋಪಾಲ ಹಾಜರುಪಡಿಸಿದ ಬಗ್ಗೆ ಅವರ ಸಹಿ ಕಂಡುಬರುತ್ತಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ . ನಿಡಿ-24, ನಿಡಿ 154 ಮತ್ತು ನಿಡಿ 155 ಯಾವ ಅಪಾರ್ಟ್ ಮೆಂಟ್ ಗೆ ಸಂಬಂದಪಟ್ಟದ್ದು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಿಡಿ 24 ಪೆಂಟ್ ಹೌಸ್ ಗೆ ಸಂಬಂದಪಟ್ಟಿರುತ್ತದೆ ಮತ್ತು ವಾದಿಗೆ ಸೇರಿರುತ್ತದೆ . ನಿಡಿ 154 ಪೆಂಟ್ ಹೌಸ್ ಗೆ ಸಂಬಂದಪಟ್ಟಂತೆ ನನ್ನ ಭಾಗಕ್ಕೆ ಸೇರಿದ ಶೇರಿನ ಹಣ . ನಿಡಿ 155 ಪೆಂಟ್ ಹೌಸ್ ಗೆ ಸಂಬಂದಪಟ್ಟಂತೆ ಎರಡನೇ ಪ್ರತಿವಾದಿಗೆ ಸೇರಿದ ಹಣ .

ಈಗ ಹೇಳಿದ ಮೇಲಿನ ನಿಡಿ 2, ನಿಡಿ 154 ಮತ್ತು ನಿಡಿ 155 CA ರವರು ನನ್ನ ಫೈಲಿನಲ್ಲಿ ಇಟ್ಟಿದ್ದರು, ಆದ್ದರಿಂದ ಅವರು ನನಗೆ ವಾಪಸ್ಸು ಕೊಟ್ಟಿರುತ್ತಾರೆ . ನಾನೇ ವಾದಿ ಮತ್ತು ಎರಡನೇ ಪ್ರತಿವಾದಿಯ Income Tax Returns ನ್ನು ಸಲ್ಲಿಸುತಿದ್ದೆ ಎಂದರೆ ಸರಿಯಲ್ಲ. 2020 ರವರೆಗೆ ಒಬ್ಬರೇ CA ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ 2017 ರವರೆಗೆ ಸುರೇಂದ್ರ ನಾಯಕ್ ನಮ್ಮ CA ಆಗಿದ್ದರು . ತದನಂತರ ಯಾರು CA ಆಗಿದ್ದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ವಾದಿ ಸುರೇಂದ್ರ ನಾಯಕ್ ರವರಿಂದ ಕಡತವನ್ನು ತೆಗೆದುಕೊಂಡು ಹೋಗಿದ್ದಾರೆ ಎಂದು ತಿಳಿಸಿರುತ್ತಾರೆ . 2019-20 ರ ವಾದಿಯ Income Tax returns ನ್ನು ಕೂಡ ನಾನೇ ನ್ಯಾಯಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿ . ಸಾಕ್ಷಿ ಮುಂದುವರಿದು ಅದು ನನ್ನ ಫೈಲಿನ ಜೊತೆ ಬಂದಿತ್ತು ಎಂದು ತಿಳಿಸಿರುತ್ತಾರೆ . ನಿಡಿ 24 ಮತ್ತು ನಿಡಿ155 ದಾಖಲೆಗಳು ವಾದಿಗೆ ಮತ್ತು ಎರಡನೇ ಪ್ರತಿವಾದಿ ಸೇರಿದ ದಾಖಲೆ ಆಗಿದ್ದರಿಂದ ಅದನ್ನು ಕೊಡದೇ ಇರಲು ಕಾರಣ ಏನು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ 2017 ರ ನಂತರ ನಾನು

ಮಾತನಾಡಿಸುತ್ತಿರಲಿಲ್ಲ ಎಂದು ತಿಳಿಸಿರುತ್ತಾರೆ . ನಿಡಿ 24 ಮತ್ತು ನಿಡಿ 155 ರ ಹಣ ಅಂದರೆ ವಾದಿ ಮತ್ತು ಎರಡನೇ ಪ್ರತಿವಾದಿಯ ಶೇರಿಗೆ ಬಂದ ಹಣವನ್ನು ಕೂಡ ನಾನೇ ಪಡೆದಿರುತ್ತೇನೆ ಎಂದರೆ ಸರಿಯಲ್ಲ . ನಾನು ವಾದಿ ಮತ್ತು ಎರಡನೇ ಪ್ರತಿವಾದಿ ಅಕೌಂಟ್ ಗೆ ಹಣವನ್ನು ಹಾಕಿಸಿ ತದನಂತರ ನಾನೇ ಅದನ್ನು ಡ್ರಾ ಮಾಡಿಸಿ ಇಟ್ಟುಕೊಂಡಿದ್ದೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು , ನೀಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ ಮತ್ತು ಸಿ.ಜೆ.ಎಂ
ಉಡುಪಿ.

ಒ.ಎಸ್.- 34/2020
ಡಿ.ಡಬ್ಲ್ಯು- 01